ಶ್ರೀ ಶಿವಾನಂದ ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಬಿಜಾಪುರ ತಾಲ್ಲೂಕಿನ 'ತಿಡಗುಂದಿ' ಮತ್ತು 'ಭೂತನಾಳ' ಗಳಲ್ಲಿ 33 ಕೆ.ವಿ. ಸ್ಟೇಷನ್‌ಗಳನ್ನು ಮಾಡುತ್ತೆವೆಂದು 1995-96 ನೇ ಸಾಲಿನಲ್ಲಿ ಆ ಕೆಲಸವನ್ನು ಪೂರೈಸಲಾಗುತ್ತದೆಂದು ಆಶ್ವಾಸನೆ ಕೊಡಲಾಗಿತ್ತು. ಆದರೆ, ಇದುವರೆಗೂ ಆ ಕೆಲಸವನ್ನು ಪ್ರಾರಂಭ ಮಾಡಿಲ್ಲ. ನನ್ನ ಎರಡನೇ ಪ್ರಶ್ನೆಗೆ, ಬಿಜಾಪುರದಲ್ಲಿ ಹಾಲಿ ಇರುವ 110 ಕೆ.ವಿ. ಸ್ಟೇಷನ್‌ನಿಂದ 33 ಕೆ.ವಿ. ಲೈನನ್ನು ಎಳೆಯಲು ಈ ಹಿಂದೆ ಉದ್ದೇಶಿಸಲಾಗಿತ್ತು. ಈ ಮಾರ್ಗವು ಜನನಿಬಿಡ ಪ್ರದೇಶಗಳಲ್ಲಿ ಹಾದುಹೋಗುವುದರಿಂದ ಉಂಟಾಗಬಹುದಾದ ಸ್ಥಳ ಸಮಸ್ಯೆಗಳಿಂದಾಗಿ ಬಿಜಾಪುರ ನಗರದ ಹೊರ ವಲಯದಲ್ಲಿರುವ ಬಿಜಾಪುರ ಕೈಗಾರಿಕಾ ಪ್ರದೇಶದಲ್ಲಿ ನಿರ್ಮಾಣವಾಗುತ್ತಿರುವ ಹೊಸ 110 ಕೆ.ವಿ. ಸ್ಟೇಷನ್‌ನಿಂದ ಈ ಎರಡು ಸ್ಟೇಷನ್‌ಗಳಿಗೆ ಬೇಕಾಗುವ 33 ಕೆ.ವಿ. ಲೈನನ್ನು ನಿರ್ಮಾಣ ಮಾಡಲು ಈಗ ಉದ್ದೇಶಿಸಿದೆ ಎಂದು ಮಾನ್ಯ ಮಂತ್ರಿಯವರು ಉತ್ತರ ಕೊಟ್ಟಿದ್ದಾರೆ. ಆದರೂ ಆ ಬಗ್ಗೆಯೂ ಇನ್ನೂ ಕಾರ್ಯಾರಂಭ ಮಾಡದೇ ಇರುವುದರಿಂದ ಬಿಜಾಪುರ ತಾಲ್ಲೂಕು ಇವತ್ತಿನ ದಿವಸ ಕತ್ತಲಿನಲ್ಲಿ ಇರುವಂಥ ಪರಿಸ್ಥಿತಿ ನಿರ್ಮಾಣ ಉಂಟಾಗಿದೆ. ಆದುದರಿಂದ, ಅದಷ್ಟು ಬೇಗ ಈ ಕೆಲಸವನ್ನು ಮಾಡಿಸಿಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಶರಣ ಬಸಪ್ಪ ದರ್ಶನಾಪುರ: ಮಾನ್ಯ ಅಧ್ಯಕ್ಷರೆ, ಬಿಜಾಪುರ ತಾಲ್ಲೂಕಿನ 'ತಿಡಗುದಿ' ಮತ್ತು 'ಭೂತನಾಳ' ಗಳಲ್ಲಿ ವಿದ್ಯುಚ್ಛಕ್ತಿ ತೊಂದರೆಯಾಗಿರುವ ಬಗ್ಗೆ ನಾನೇ ಸ್ವತ: ಬಿಜಾಪುರಕ್ಕೆ ಹೋಗಿ ಅಲ್ಲಿನ ಅಧಿಕಾರಿಗಳು ಹಾಗೂ ಮುಖ್ಯಸ್ಥರೊಡನೆ ಚರ್ಚೆ ಮಾಡಿದ್ದೇನೆ. 'ತಿಡಗುಂದಿ' ಮತ್ತು 'ಭೂತನಾಳ' ವಿದ್ಯುಚ್ಛಕ್ತಿ ಒದಗಿಸುವ ಬಗ್ಗೆ ಸ್ಟೇಷನ್ ಮಾಡುವುದಕ್ಕೆ ಭೂಮಿಯನ್ನು ವಶಪಡಿಸಿಕೊಳ್ಳುವ ಕೆಲಸ ಇನ್ನೂ ಮುಗಿದಿಲ್ಲ.

ಇದು ಬಿಜಾಪುರ ಮುನಿಸಿಪಾಲಿಟಿ ವ್ಯಾಪ್ತಿಯಲ್ಲಿ ಬರಬೇಕಾಗಿತ್ತು. ಮಾನ್ಯ ಸದಸ್ಯರು ಹೇಳಿದಂತೆ ಅವರ ಕಾಲದಲ್ಲೇ ಭೂಮಿ ಕೊಟ್ಟಿರುವುದಿದ್ದರೂ ಇರಬಹುದು ಆದರೆ ಮುನಿಸಿಪಾಲಿಟಿಯಿಂದ ನಮಗೆ ಯಾವ ಪತ್ರವೂ ಬಂದಿಲ್ಲ. ಕೂಡಲೇ ಆ ಭೂಮಿಯನ್ನು ಅದಷ್ಟು ಬೇಗ ಸ್ವಾಧೀನಮಾಡಿಕೊಂಡು ತಿಡಗುಂದಿ ಹಾಗೂ ಭೂತನಾಳಗಳಲ್ಲಿ 33 ಕೆ.ವಿ. ಸ್ಟೇಷನ್‌ಗಳನ್ನು ನಿರ್ಮಿಸಲಾಗುವುದು ಅದರಿಂದ ಆ ಪ್ರದೇಶದ ವಿದ್ಯುತ್ ಕೊರತೆ ನೀಗಲು ಸಹಾಯವಾಗುವುದು.

ಶ್ರೀ ಶಿವಾನಂದ ಪಾಟೀಲ್: ಕೆಲಸ ಪ್ರಾರಂಭಿಸಲು ಟೆಂಡರ್ ಯಾವಾಗ ಕರೆಯುತ್ತೀರಿ?

ಶ್ರೀ ಶರಣಬಸಪ್ಪ ದರ್ಶನಾಪುರ: ಈಗಾಗಲೇ ಆಡಳಿತ ಅನುಮೋದನೆ ದೊರಕಿದೆ ಟೆಂಡರನ್ನು ಕೂಡಲೇ ಕರೆಯಲಾಗುವುದು.

ಪುತ್ತೂರು ತಾಲ್ಲೂಕಿನಲ್ಲಿ ಮಸೀದಿಗಳಿಗೆ ಹಣ ಮಂಜೂರಾತಿಯ ಬಗ್ಗೆ

62(412) ಶ್ರೀ ಡಿ.ವಿ. ಸದಾನಂದ ಗೌಡ, ಶಾಸಕರು(ಪುತ್ತೂರು):

ಮಾನ್ಯ ಗೃಹ ಮತ್ತು ಪಕ್ಷ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ವಕ್ಫ್ ಸಮಿತಿಯಿಂದ ಯಾವುದೇ ಮಸೀದಿಗೆ ಹಣ ಮಂಜೂರಾಗಬೇಕಾಧಲ್ಲಿ ಅನುಸರಿಸುತ್ತಿರುವ ನಿಯಮಗಳೇನು:

(ಆ) ಪುತ್ತೂರು ತಾಲ್ಲೂಕಿನಲ್ಲಿನ ಆರು ಮಸೀದಿಗಳಿಗಾಗಿ ಅನುದಾನ ಕೋರಿ ಎಲ್ಲಾ ಪ್ಲಾನ್ ಎಸ್ಟಿಮೇಟ್‌ಗಳನ್ನು ಅರ್ಜಿ ಸಮೇತ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

(ಇ) ಈ ಮಸೀದಿಗಳಿಗೆ ಹಣ ಮಂಜೂರು ಮಾಡಲಾಗುವುದೇ? ಹಾಗಿದ್ದಲ್ಲಿ ಯಾವಾಗ ಹಣ ಬಿಡುಗಡೆ ಮಾಡಲಾಗುವುದು?

ಶ್ರೀ. ಆರ್. ರೋಷನ್ ಬೇಗ್ (ಗೃಹ ಮತ್ತು ಪಕ್ಷ ಸಚಿವರು)

(ಅ) ವಕ್ಫ್ ಅನುದಾನಗಳನ್ನು ಸಹಾಯಾನುದಾನ ಸಂಹಿತೆ ನಿಯಮಗಳ ಪ್ರಕಾರ ಬಿಡುಗಡೆ ಮಾಡಲಾಗುತ್ತಿದೆ.

(ಆ) -ಹೌದು-

(ಇ) ಪುತ್ತೂರು ತಾಲ್ಲೂಕಿನ ಆರು ಮಸೀದಿಗಳಿಗೆ ಮಂಜೂರಾದ ಅನುದಾನದ ಮಾಹಿತಿಯು ಈ ಕೆಳಕಂಡಂತಿದೆ. ಅನುದಾನವನ್ನು ಸದ್ಯದಲ್ಲೇ ಬಿಡುಗಡೆ ಮಾಡಲಾಗುವುದು.

ಕ್ರಮ ಸಂಖ್ಯೆ:	ಹೆಸರು	ಮೊತ್ತ ರೂ.	ಉದ್ದೇಶ
1.	ಮೊಹಿಯುದ್ದಿನ್ ಜುಮ್ಮಾ ಮಸೀದಿ, ಹಳೇನರ್ನಕಿ, ಬುಜ್ರುರ್ ವಿಲೇಜ್, ಪುತ್ತೂರು ತಾ:	20,000-00	ಮದ್ರೆಸಾ ಕಟ್ಟಲು
2.	ತಖ್‌ವಿಯತುಲ್ ಇಸ್ಲಾಮ್, ಜಮಾತ್ ಕಮಿಟಿ, ಮರ್ದಾಳ ಪೊಸ್ಟ್ ಪುತ್ತೂರು ತಾಲ್ಲೂಕು.	25,000-00	-ಅದೇ
3.	ಬದ್ರಿಯಾ ಜುಮ್ಮಾ ಮಸೀದಿ, ಮದವೊ, ಕೆಯ್ಯೂರ್ ವಿಲೇಜ್, ಪುತ್ತೂರು ತಾಲ್ಲೂಕು.	20,000-00	ಮಸೀದಿ ಕಟ್ಟಡದ ಜೀರ್ಣೋದ್ಧಾರ
4.	ಜುಮ್ಮಾ ಮಸೀದಿ ಮತ್ತು ದರ್ಗಾ ಷರೀಪ್, ಬೈತಡ್‌ಕಾ, ಕಣಿಯೂರ್ ಪೋಸ್ಟ್, ಪುತ್ತೂರು	25,000-00	ಮದ್ರೆಸಾ ಕಟ್ಟಲು

5.	ಫೀರ್‌ಮೊಹಲ್ಲಾ ಮೊಹಿಯುದ್ದಿನ್ ಜುಮ್ಮಾ ಮಸೀದಿ, ಕೂರ್‌ನಡ್‌ಕಾ, ಕೆಮ್ಮಂಜೆ ವಿಲೇಜ್, ಪುತ್ತೂರು.	25,000-00	ಮಸೀದಿ ಕಟ್ಟಲು
6.	ಮೊಹಿಯೂದ್ದೀನ್ ಜುಮ್ಮಾ ಮಸೀದಿ ಮತ್ತು ನೂರುಲ್‌ಹುದಾ ಮದ್ದೇಸಾ, ವಲ್ಲಾಲ್, ಪುತ್ತೂರು	20,000-00	-ಅದೇ-

ಶ್ರೀ ಡಿ. ವಿ. ಸದಾನಂದಗೌಡ: ಅಧ್ಯಕ್ಷರೇ, ಇದು ಬಹಳ ಸೂಕ್ಷ್ಮವಾದ ವಿಚಾರ. ಪ್ರಾಯಶ:

ಸಚಿವರು ಕೊಟ್ಟಿರುವ ಉತ್ತರ ನೋಡಿದರೆ ಸರ್ಕಾರ ಹೇಗೆ ಕೆಲಸ ಮಾಡುತ್ತಿದೆ ಎಂಬುದು ಗೊತ್ತಾಗುತ್ತದೆ. ನನ್ನ ಕ್ಷೇತ್ರದಿಂದ 6 ಮಸೀದಿಗಳಿಗೆ ಅನುದಾನವನ್ನು ಕೋರಿದ್ದೆ ಆಗ ಪ್ರಪೋಸಲನ್ನು ಜಿಲ್ಲಾ ಉಸ್ತುವಾರಿ ಮಂತ್ರಿಗಳ ಮೂಲಕ ಕಳುಹಿಸಬೇಕೆಂದು ನನಗೆ ತಿಳಿದುಬಂದು ನಾನು ಜಿಲ್ಲಾ ಮಂತ್ರಿ ಮೊಹಿದ್ದೀನ್‌ರವರನ್ನು ಭೇಟಿ ಮಾಡಿ ಅವರ ಮೂಲಕವೇ ಕಳುಹಿಸಿದ್ದೆ. ಈ ಪದ್ಧತಿಯನ್ನೇ ಎಲ್ಲಾ ಜಿಲ್ಲೆಗಳಲ್ಲೂ ಸರ್ಕಾರ ಅನುಸರಿಸುತ್ತಿದೆಯೇ ಅಥವಾ ದಕ್ಷಿಣ ಕನ್ನಡ ಜಿಲ್ಲೆಗೆ ಮಾತ್ರ ಈ ಪದ್ಧತಿಯೇ? ಆ 6 ಮಸೀದಿಗಳ ಪ್ಲಾನ್ ಎಸ್ಟಿಮೇಟ್‌ಗಳೆಲ್ಲವನ್ನೂ ಶ್ರೀ ಮೊಹಿದ್ದೀನ್‌ರವರಿಗೆ ಕೊಟ್ಟಿದ್ದೆ ಆದರೆ ಸಚಿವರು ಈಗ ಉತ್ತರದಲ್ಲಿ ಒದಗಿಸಿರುವ 6 ಮಸೀದಿಗಳ ವಿಳಾಸಕ್ಕೂ ನಾನು ಕಳುಹಿಸಿದ್ದ ವಿಳಾಸಕ್ಕೂ ಸಂಬಂಧವೇ ಇಲ್ಲ. ಬಿಜೆಪಿ ಶಾಸಕರಾಗಿರುವ ಕ್ಷೇತ್ರಗಳ ಮಸೀದಿ ರಿಪೇರಿಯಲ್ಲೂ ರಾಜಕೀಯ ನಡೆದಿದೆಯೇ? ಇದನ್ನು ನೋಡಿದರೆ ಜಾತಿವಾದಗಳು ಯಾರು ಎಂಬುದು ಗೊತ್ತಾಗುತ್ತದೆ.

Mr.SPEAKER:- You have asked what are the rules followed while sanctioning money to any mosques from the wakf Committee. They have replied the wakf grants are sanctioned. Your next question is "whether it has come to the notice of the Government that...', the answer is 'Yes' and next question is 'whether grants will be sanctioned...'

ಶ್ರೀ ಕೆ. ಎಸ್. ಈಶ್ವರಪ್ಪ: ಸ್ವಾಮಿ, ಒಬ್ಬ ಶಾಸಕರು ಕಳಿಸಿಕೊಟ್ಟಿದ್ದ ಲಿಸ್ಟನ್ನೇ ಬದಲಾಯಿಸಿ ಇವರಿಗೆ ಬೇಕಾದ ಬೇರೆ ಲಿಸ್ಟ್ ಕೊಟ್ಟಿದ್ದಾರೆ. ಇದು ದುರುದ್ದೇಶ ಎಂದು ಮಾನ್ಯ, ಸದಸ್ಯರು ಹೇಳುತ್ತಿದ್ದಾರೆ.

Mr. SPEAKER:- Sri Ramakrishna, why don't you guide? you are a fortunate man. You did not have the problem when you were parliamentary Affairs Minister. You never became the Speaker.

ಶ್ರೀ ವೈ ರಾಮಕೃಷ್ಣ: ಅಧ್ಯಕ್ಷರೇ ಬಿಜೆಪಿಯವರನ್ನು ಮುಸ್ಲಿಂ ವಿರೋಧಿ ಎಂದು ಚಿತ್ರಿಸುವ ಜನರ ಕೈವಾಡ ಇದರಲ್ಲಿ ನಡೆದಿದೆ ಎಂದು ಸದಸ್ಯರ ಅಭಿಪ್ರಾಯ. ಬಿಜೆಪಿಯವರು ಮಸೀದಿ ರಿಪೇರಿಗೆ ಹಣ ಕೇಳಿದರೂ ಅದರಲ್ಲಿ ರಾಜಕೀಯವೇ?

ಅಧ್ಯಕ್ಷರು: ಸಚಿವರು ಇದನ್ನು ಗಮನಿಸಬೇಕು. ಬಿಜೆಪಿ ಶಾಸಕರು ಆರಿಸಿಬಂದಿರುವ ಕಡೆ ಮಸೀದಿ ರಿಪೇರಿಗೆಂದು ಹಣ ಕೇಳುತ್ತಿದ್ದಾರೆ, ಇದು ಆರೋಗ್ಯಕರವಾದ ಬೆಳವಣಿಗೆ. ತಕ್ಷಣ ಆದ್ಯತೆ ಕೊಟ್ಟು ಇದನ್ನು ಮಾಡಿಸಬೇಕು.

ಶ್ರೀ ಜೆ ಎಚ್ ಪಟೇಲ್: ಮಸೀದಿಗಳ ಬಗ್ಗೆ ಬಿಜೆಪಿ ಸದಸ್ಯರು ಏನು ಸಹಾಯ ಎಷ್ಟು ಸಹಾಯ ಬೇಕೆಂದು ಕೇಳುತ್ತಾರೋ ಅಷ್ಟೂ ಮಾಡುತ್ತೇವೆ. ಮಸೀದಿ ಕಟ್ಟುವ ವಿಷಯದಲ್ಲಿ ಇವರು ನಮಗೆ ಪತ್ರ ಬರೆಯಲಿ. ನಾವು ಸಹಾಯಕ್ಕೆ ಸಿದ್ಧರಿದ್ದೇವೆ.

ಶ್ರೀ ಕೆ ಎಸ್ ಈಶ್ವರಪ್ಪ: ಮುಖ್ಯಮಂತ್ರಿಗೇನೋ ಹೀಗೆ ಹೇಳುತ್ತಿದ್ದಾರೆ. ಆದರೆ ನನ್ನ ಶಿವಮೊಗ್ಗ ಕ್ಷೇತ್ರದ ಮಸೀದಿಗಳ ಬಗ್ಗೆ ನಾನು ಪತ್ರ ಬರೆದು ತಿಂಗಳುಗಳೇ ಕಳೆದಿವೆ ಆದರೆ ಇವತ್ತಿನವರೆಗೂ ಏನೂ ಧನಸಹಾಯ ಮಾಡಿಲ್ಲ. ಇಲ್ಲಿ ಈಗ ಪ್ರಶ್ನೆ ಇರುವುದು ಮಸೀದಿಗಳ ವಿಷಯದಲ್ಲಿ ಸರ್ಕಾರ ರಾಜಕೀಯ ದುರ್ಲಾಭ ಪಡೆದುಕೊಳ್ಳುತ್ತಿದೆ ಎಂಬುದು.

ಅಧ್ಯಕ್ಷರು: ಈಶ್ವರಪ್ಪನವರೇ, ಮುಖ್ಯಮಂತ್ರಿಗಳ ಮಾತನ್ನು ನೀವು ಸೂಕ್ಷ್ಮವಾಗಿ ಅರ್ಥಮಾಡಿಕೊಳ್ಳಬೇಕು ಅವರು ಹೇಳಿದ್ದು ಮಸೀದಿ ಕಟ್ಟುವ ವಿಚಾರದಲ್ಲಿ ಸಹಾಯ ಮಾಡಲು ಸಿದ್ಧ ಎಂದು.

-(ಮುಂದಲ)-

ಶ್ರೀ ಸಿ. ಆರ್. ಸಗೀರ್ ಅಹಮ್ಮದ್: ಈ ರಾಷ್ಟ್ರದಲ್ಲಿರುವ ಮುಸ್ಲಿಮರ ರಕ್ಷಣೆ ಮಾಡಬೇಕಾದ್ದು ಬಿಜೆಪಿ ಜನತಾದಳ ಅಷ್ಟೇ ಅಲ್ಲ ಕಾಂಗ್ರೆಸ್‌ನವರೂ ಸೇರಿದಂತೆ ಎಲ್ಲಾ ಪಕ್ಷಗಳ ಕರ್ತವ್ಯ. ಸರ್ಕಾರ ಮಸೀದಿಗಳ ರಿಪೇರಿ ಬಗ್ಗೆ ಕೂಡಲೇ ಗಮನಹರಿಸಿ ಹಣ ಬಿಡುಗಡೆ ಮಾಡಬೇಕು. ಇನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ಮಸೀದಿಗಳ ವಿಚಾರದಲ್ಲಿ ಎಷ್ಟೇ ಹಣ ಬೇಕಾದರೂ ಕೊಡಲು ಸರ್ಕಾರ ಸಿದ್ಧವಿದೆ ಎಂದು. ನಾನು ಒಂದು ವಿಚಾರವನ್ನು ಅವರ ಗಮನಕ್ಕೆ ತರಬಯಸುತ್ತೇನೆ. ಈ ಸಾಲಿಗೆ ವಕ್ಫ್ ಮಂಡಲಿಗೆ ಸರ್ಕಾರ 4.5 ಕೋಟಿ ಹಣ ಬಿಡುಗಡೆ ಮಾಡುವುದಾಗಿ ತಿಳಿಸಿತ್ತು ಆದರೆ ಇದುವರೆಗೂ ಬಿಡುಗಡೆಯಾಗಿರುವುದು ಕೇವಲ 50 ಲಕ್ಷ ರೂ ಮಾತ್ರ ಆದ್ದರಿಂದ ಉಳಿದ ಹಣವನ್ನು ಕೂಡಲೇ ಸರ್ಕಾರ ಬಿಡುಗಡೆ ಮಾಡಬೇಕೆಂದು ಮುಖ್ಯಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ.

-(ಮುಂದಲ)-

ಶ್ರೀ ಜೆ ಹೆಚ್ ಪಟೇಲ್: ಹಣ ಬಿಡುಗಡೆ ಮಾಡುತ್ತೇವೆಂದು ಆಗಲೇ ಹೇಳಿದ್ದೇವೆ. ವಕ್ಫ್ ಮಂಡಲಿಗೂ ಬಿಡುಗಡೆ ಮಾಡುತ್ತೇವೆ. ಆದರೆ ನನಗೆ ಆಶ್ಚರ್ಯವಾಗುವುದೇನೆಂದರೆ ಮಸೀದಿ ವಿಷಯ ಬಂದ ತಕ್ಷಣ ಬಿಜೆಪಿ ಸದಸ್ಯರಿಗೆ ಏಕೆ ಇಷ್ಟು ಟೆನ್‌ಶನ್?

ಅಧ್ಯಕ್ಷರು: ಈಗ ಮುಂದಿನ ಪ್ರಶ್ನೆ.

ಶಿಡ್ಲಘಟ್ಟ ತಾಲ್ಲೂಕಿನ ದಿಬ್ಬೂರ ಹಳ್ಳಿ ಪೋಲಿಸ್ ಠಾಣೆಯಲ್ಲಿ ದಾಖಲಾಗಿರುವ ಕ್ರಿಮಿನಲ್ ಮೊಕದ್ದಮೆಗಳು.

63 (435) ಶ್ರೀ.ಹೆಚ್.ಶಿವಪ್ಪ (ಹರಿಹರ):

ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?